ಓ.ಎಸ್ಃ 467/2018

ಪಿ.ಡಬ್ಲ್ಯೂಃ 01

ಲೋಹಿತಾ ಗೌಡರ

**<u>ದಿನಾಂಕಃ 06/03/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಪಿ ಎಂ ಕೆ ವಕೀಲರಿಂದಃ</u>**

1. 1 ನೇ ಪ್ರತಿವಾದಿ ನನಗೆ ಪರಿಚಿತಳಲ್ಲ. ನನ್ನ ಗಂಡನ ಹೆಸರು ಬಸಲಿಂಗಪ್ಪ. ನನ್ನ ಗಂಡನಿಗೆ ಶಾಂತಮ್ಮ ಎಂಬ ತಂಗಿ ಮಾತ್ರ ಇದ್ದಳು. ಸದರಿ ಶಾಂತಮ್ಮಳಿಗೆ ಬಸಮ್ಮ ಅಂತಾ ಕೂಡ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಶಾಂತಮ್ಮಳನ್ನು ನಿಡಗುಂದಿಗೆ ಮದುವೆ ಮಾಡಿಕೊಡಲಾಗಿತ್ತು. ಅವರ ಗಂಡನ ಹೆಸರು ಈರಣ್ಣ ಬಣ್ಣದ.

2. ದಾವಾ ಸ್ವತ್ತನ್ನು 1992 ರಲ್ಲಿ ನನಗೆ ಸರಕಾರದವರು ನೀಡಿದ್ದಾರೆ. ಯಾವ ಯೋಜನೆಡಿಯಲ್ಲಿ ನನಗೆ ನೀಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತು ಇರುವ ಜಮೀನಿನ ಮೂಲ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿದ್ದೇನೆ. ದಾವಾ ಸ್ವತ್ತು ಸರ್ವೆ ನಂಬರ 447/1 ರ ಜಮೀನಿನಲ್ಲಿ ಇರುವ ನಿವೇಶನ ಎಂದರೆ ಸರಿ. ದಾವಾ ಸ್ವತ್ತು ನಿವೇಶನ ಸಂಃ 1. ಅದರ ಕ್ಷೇತ್ರ ಎಂದರೆ ಸಾಕ್ಷಿದಾರರು ಉದ್ದ 40 ಅಡಿ ಮತ್ತು ಅಗಲ 30 ಅಡಿ ಎಂದು ಉತ್ತರಿಸುತ್ತಾರೆ. ಸದರಿ ನಿವೇಶನ ದಕ್ಷಿಣಾಭಿಮುಖವಾಗಿ ಇರುತ್ತದೆ. ಅಂದರೆ ಉತ್ತರ-ದಕ್ಷಿಣವಾಗಿ 40 ಅಡಿ ಇದೆ ಎಂದು ನುಡಿಯುತ್ತಾರೆ.

3. ನಾನು ಸದರಿ ನಿವೇಶನಕ್ಕೆ 1992 ರಲ್ಲಿಯೇ ಪಂಚಾಯಿತಿಯಲ್ಲಿ ದಾಖಲೆಗಳನ್ನು ಪಡೆದಿದ್ದೇನೆ. ನಾನು 1992 ರಿಂದ ಇಲ್ಲಿಯವರೆಗೆ ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನೋಡುತ್ತಾ ಬಂದಿದ್ದೇನೆ. ನಾನು 1992 ರಿಂದ ಇಲ್ಲಿಯವೆರೆಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಭರಿಸುತ್ತಾ ಬಂದಿದ್ದೇನೆ.

4. ದಾವಾ ಸ್ವತ್ತಿನಲ್ಲಿ ಎರಡು ಪಟ್ಟಿಗಳಾಗಿವೆ ಎಂದರೆ ಸರಿಯಲ್ಲ. ನಿವೇಶನ ಸಂಃ 447/1 ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿವೇಶನ ಸಂಃ 447/1/2 ರಲ್ಲಿ ನನ್ನ ಹೆಸರಿದೆ ಎಂದರೆ ಸರಿಯಲ್ಲ.

5. 1996 ರಲ್ಲಿ ನನಗೆ ಹಣಕಾಸಿನ ಅಡಚಣೆಯಾಗಿತ್ತು ಎಂದರೆ ಸರಿಯಲ್ಲ. ಆದ್ದರಿಂದ 1996 ರಲ್ಲಿ ದಾವಾ ಸ್ವತ್ತಿನ ಉತ್ತರ ಭಾಗದ 15 X 30 ಅಡಿ ಅಳತೆಯ ನಿವೇಶನವನ್ನು 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟಿರುತ್ತೀರಿ ಎಂದರೆ ಸರಿಯಲ್ಲ. ಆ ಪ್ರಕಾರ 19/02/1996 ರಲ್ಲಿ ನಿಡಗುಂದಿ ಗ್ರಾಮ ಪಂಚಾಯಿತಿಯಲ್ಲಿ ಠರಾವು ಮಾಡಲಾಗಿದೆ ಎಂದರೆ ಅದು ಸೃಷ್ಟಿತ ದಾಖಲೆ ಎಂದು ನುಡಿಯುತ್ತಾರೆ. ಆ ದಿನದಿಂದ 2018 ರ ವರೆಗೆ ಅವರಿಗೆ 1 ನೇ ಪ್ರತಿವಾದಿಗೆ ನೀಡಿದ ನಿವೇಶನ ಅವರ ಹೆಸರಿನಲ್ಲಿಯೇ ದಾಖಲೆಗಳು ಆಗಿದ್ದವು ಎಂದರೆ ಎಲ್ಲ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟ ನಂತರ ಅವರ ಹೆಸರಿಗೆ ಆದ ಎಲ್ಲ ದಾಖಲಾತಿಗಳ ಬಗ್ಗೆ ನನಗೆ 1996 ರಿಂದಲೇ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸಾಕ್ಷಿದಾರರು ನನಗೆ ಯಾವುದೇ ಮಾಹಿತಿ ಇರಲಿಲ್ಲ, ಮಾಹಿತಿ ಬಂದ ತಕ್ಷಣ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಈಗ ನನ್ನ ಸ್ವತ್ತಾದ ವಿ ಪಿ ಸಿ ನಂಃ 447/1/2 ರಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸಾಕ್ಷಿದಾರರು ನನ್ನ ಸ್ವತ್ತು ವಿ ಪಿ ಸಿ ನಂಃ 447/1, ನಾನು ಅದರಲ್ಲಿ ಮನೆ ಕಟ್ಟಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಮುಂದುವರೆದು, ವಿ ಪಿ ಸಿ ನಂಃ 447/1 ರಲ್ಲಿ ಯಾವುದೇ ಪಟ್ಟಿಗಳಾಗಿಲ್ಲ, ಸದರಿ ಎಲ್ಲ ದಾಖಲೆಗಳನ್ನು ಪ್ರತಿವಾದಿಯರು ಸೃಷ್ಟಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ವಿ ಪಿ ಸಿ ನಂಃ 447 /1 ರಲ್ಲಿ ಪೂರ್ವಕ್ಕೆ ಜಾಗವನ್ನು ಬಿಟ್ಟು ಪಶ್ಚಿಮಕ್ಕೆ ಮನೆ ಕಟ್ಟಿಕೊಂಡಿದ್ದೇನೆ. ಸದರಿ ಪೂರ್ವಕ್ಕೆ ಬಿಟ್ಟ ಜಾಗವೇ ವಿ ಪಿ ಸಿ ನಂಃ 447/1/1 ಎಂದರೆ ಸರಿ. ಸದರಿ ಸ್ವತ್ತೇ 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸಾಕ್ಷಿದಾರರು ಸದರಿ ನಿವೇಶನ ಸಂಪೂರ್ಣವಾಗಿ ನನ್ನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

7. ವಿ ಪಿ ಸಿ ನಂಃ 447/1/1 ರ ನಿವೇಶನವನ್ನು 2018 ರಲ್ಲಿ 1 ನೇ ಪ್ರತಿವಾದಿ ತಮ್ಮ ಪ್ರಾಪಂಚಿಕ ಅಡಚಣೆಗೋಸ್ಕರ 2 ನೇ ಪ್ರತಿವಾದಿಗೆ 2018 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ

ಸಾಕ್ಷಿದಾರರು ಅವೆಲ್ಲಾ ಸೃಷ್ಟಿತ ದಾಖಲೆಗಳು, ನನಗೆ ಅವುಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ 2 ನೇ ಪ್ರತಿವಾದಿ ಖರೀದಿ ಮಾಡಿದ ದಿನದಿಂದ ವಿ ಪಿ ಸಿ ನಂಃ 447/1/1 ಪಂಚಾಯಿತಿಯಲ್ಲಿ 2 ನೇ ಪ್ರತಿವಾದಿ ಹೆಸರಿಗೆ ದಾಖಲಾಗಿದೆ ಎಂದರೆ ಅದು ಗೊತ್ತಾಗಿಯೇ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಪಂಚಾಯಿತಿ ದಾಖಲಾತಿಗಳನ್ನು ಪಡೆದ ನಂತರ 2 ನೇ ಪ್ರತಿವಾದಿಯು ಪಂಚಾಯಿತಿಯಿಂದ ಪರವಾನಿಗೆ ಪಡೆದು ವಿ ಪಿ ಸಿ ನಂಃ 447/1/1 ಮನೆ ಕಟ್ಟಲು ಪ್ರಾರಂಭಿಸಿದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಆದ್ದರಿಂದಲೇ ನಾನು ದಾವೆಯನ್ನು ಸಲ್ಲಿಸಿ ಕಟ್ಟಡ ಕಟ್ಟಬಾರದು ಎಂದು ನಾನು ಸ್ಟೇ ಅನ್ನು ಪಡೆದಿದ್ದೇನೆ ಎಂದು ನುಡಿಯುತ್ತಾರೆ.

8. ನಾನು ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದಲೇ ಅವರ ವಿರುದ್ಧ ಸುಳ್ಳು ದಾವೆಯನ್ನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿ ಪಿ ಸಿ ನಂಃ 447/1/1 ಅನ್ನು ಹಿರಿಯರ ಸಮಕ್ಷಮ 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದರೂ ಸಹಿತ ಈಗ ಅದನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**

**ಬಸವನ ಬಾಗೇವಾಡಿ.**